ಎಂ.ವಿ.ಸಿ - 664/2024
ಪಿ.ಡಬ್ಲ್ಯು. - 01

**ದಿನಾಂಕ 24-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಎಸ್ಎಸ್ಎಲ್ಸಿನಲ್ಲಿ ಅನುತ್ತೀರ್ಣಗೊಂಡು ವಿದ್ಯಾಬ್ಯಾಸ ನಿಲ್ಲಿಸಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಪೊಲೀಸ್ ದಾಖಲಾತಿಯನ್ನು ನಾನು ಓದಿ ಅರ್ಥ ಮಾಡಿಕೊಂಡಿಲ್ಲ. ನಾನು ಸಲ್ಲಿಸಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನು ಓದಿ ಅರ್ಥ ಮಾಡಿಕೊಂಡಿದ್ದೇನೆ. ಅಪಘಾತ ಹೇಗೆ ಆಯಿತು ಎನ್ನುವ ಬಗ್ಗೆ ನನಗೆ ಮಾಹಿತಿ ಇರುತ್ತದೆ . ಪೊಲೀಸರು ನನ್ನನ್ನು ಅಪಘಾತದ ಬಗ್ಗೆ ವಿಚಾರಿಸಿದ ಬಗ್ಗೆ ನನಗೆ ನೆನಪಿಲ್ಲ. ನಾನು ಚಲಾಯಿಸುತಿದ್ದ ಮೋಟಾರು ಸೈಕಲ್ ನನ್ನ ಸಂಬಂಧಿಕನಿಗೆ ಸೇರಿರುತ್ತದೆ. ವೈದ್ಯರಾದ ವಿನೋದ್ ಮತ್ತು ನಾನು ಸೇರಿ ನಿಪಿ 13 ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ವೈದ್ಯರು ಹೇಳಿರುವಂತೆ ನನಗೆ ಯಾವುದೇ ಜ್ಞಾಪಕ ಶಕ್ತಿ (Memory loss)ಕಡಿಮೆ ಆಗಿಲ್ಲ ಮತ್ತು ತಿಳಿದುಕೊಳ್ಳುವಿಕೆ ಕೂಡ ಕಡಿಮೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತ ದಿನ ನಾನು ಕುಂಜಾರಿನಿಂದ ಮೋಟಾರು ಸೈಕಲ್ ಗ್ಯಾರೇಜ್ ಇರುವ ಇಂದ್ರಾಳಿ ಅಂದರೆ ಮಣಿಪಾಲದ ರಸ್ತೆಯಲ್ಲಿ ಹೋಗುತಿದ್ದೆ . ಅಪಘಾತದ ಸ್ಥಳದಲ್ಲಿ ಆರೂರು ಕಡೆಯಿಂದ ಬಲಕಡೆಗೆ ತಿರುವು ತೆಗೆದುಕೊಂಡು ಮಣಿಪಾಲದ ಕಡೆಗೆ ಹೋಗಬೇಕು ಎಂದರೆ ಸರಿ. ಕಾರು ಮುನ್ನಿನಜಡ್ಡು ಕಡೆಯಿಂದ ಬರುತಿತ್ತು. ಮುನ್ನಿನಜಡ್ಡು ಮತ್ತು ಮಣಿಪಾಲದ ರಸ್ತೆ ನೇರವಾದ ರಸ್ತೆ ಎಂದರೆ ಸಾಕ್ಷಿ ಅಲ್ಲಿ ತಿರುವು ಇದೆ ಎಂದು ತಿಳಿಸಿರುತ್ತಾರೆ . ಅಪಘಾತದ ಪೂರ್ವದಲ್ಲಿ ಕಾರು ಬರುವುದನ್ನು ನಾನು ನೋಡಿದ್ದೇನೆ ಆದರೇ ಅದು ಒಮ್ಮೆಲೆ ಬಂದು ಡಿಕ್ಕಿಪಡಿಸಿರುತ್ತದೆ. ಕಾರು ಎಡಭಾಗದಲ್ಲಿ ಅದರ ಪಾಡಿಗೆ ಮಣಿಪಾಲದ ರಸ್ತೆಯಲ್ಲಿ ಹೋಗುತಿತ್ತು ಎಂದರೆ ಸರಿ. ನಿಪಿ 6 ರಲ್ಲಿ ನನ್ನ ಮೋಟಾರು ಸೈಕಲ್ ಕಾರಿನ ಯಾವ ಭಾಗಕ್ಕೆ ಡಿಕ್ಕಿಪಡಿಸಿತು ಎಂದು ಕಾಣಿಸಲಾಗಿದೆ ಎಂದರೆ ಸರಿ . ನಾನು ಕಾರನ್ನು ಗಮನಿಸದೇ ಒಮ್ಮೆಲೇ ಮುನ್ನಿನಜಡ್ಡು ಕಡೆಯಿಂದ

ಮಣಿಪಾಲದ ಕಡೆಗೆ ಬಂದಿದ್ದರಿಂದ ಕಾರಿನ ಬಲಭಾಗಕ್ಕೆ ನಾನೇ ಹೋಗಿ ಡಿಕ್ಕಿಹೊಡೆದಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತಕ್ಕೆ ಕಾರಿನ ಚಾಲಕನ ತಪ್ಪು ಇಲ್ಲ ಎಂದರೆ ಸರಿಯಲ್ಲ. ನನಗೆ ಏನು ಗಾಯಗಳು ಆಗಿದೆ ಎಂದು ನಿಪಿ 5 ರಲ್ಲಿ ಕಾಣಿಸಲಾಗಿದೆ ಎಂದರೆ ಸರಿ. ನನ್ನ ತಲೆಗೆ ತರಚಿದ ಗಾಯ ಮಾತ್ರ ಆಗಿದೆ ಎಂದರೆ ಸರಿಯಲ್ಲ ಮತ್ತು ನನ್ನ ಎಡ ಕ್ಲ್ಯಾವಿಕಲ್ ಬೋನ್ ಮಾತ್ರ ಕಟ್ಟಾಗಿದೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೆಟ್ ಹಾಕಿದ್ದರೇ ನನಗೆ ಯಾವುದೇ ರೀತಿಯ ಗಾಯಗಳು ಆಗುತಿರಲಿಲ್ಲ ಎಂದರೆ ಸಾಕ್ಷಿ ಹೆಲ್ಮೆಟ್ ಹಾರಿ ಹೋಯಿತು ಎಂದು ತಿಳಿಸಿರುತ್ತಾರೆ. ನಾನು ಹೆಲ್ಮೆಟ್ ನ್ನು ಹಾಕಿದ್ದರೇ ಮತ್ತು ಅದು ಹಾರಿ ಹೋಗಿದ್ದರೇ ಪೊಲೀಸರು ಅದನ್ನು ಜಪ್ತಿ ಮಾಡುತಿದ್ದರು ಎಂದರೆ ಸಾಕ್ಷಿ ಅದು ಸಿಗಲಿಲ್ಲ ಎಂದು ತಿಳಿಸಿರುತ್ತಾರೆ . ನನಗೆ ತಿಂಗಳಿಗೆ ರೂ 1,00,000 ಆದಾಯ ಇದ್ದ ಬಗ್ಗೆ ದಾಖಲೆ ಇದೆ ಅದನ್ನು ನಾನು ಹಾಜರುಪಡಿಸಬಹುದು . ನಾನು ಹೇಳುವಂತೆ ನನಗೆ ರೂ 1,00,000 ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು Salesman come Driving ಕೆಲಸ ಮಾಡುತಿರಲಿಲ್ಲ ಎಂದರೆ ಸರಿಯಲ್ಲ. ನನಗೆ Transport License ಇಲ್ಲ ಆದರೇ ನಾನು ಸೌದಿಯ ಒಂದು ಕಂಪೆಯಲ್ಲಿ ಕೆಲಸ ಮಾಡುತಿದ್ದೆ . ನನಗೆ ಯಾವುದೇ ಇನ್ಸುರೆನ್ಸ್ ಕಂಪೆನಿಯಿಂದ ಮೆಡಿಕಲ್ ಕ್ಲೇಮ್ ಆಗಿಲ್ಲ . ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿರುವಂತೆ ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಎಂ.ವಿ.ಸಿ - 664/2024
ಪಿ.ಡಬ್ಲ್ಯು. - 01

ಪ್ರ. ಹಿ. ಸಿ. ನ್ಯಾ. ಉಡುಪಿ.